ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಭಾರತ ಸರ್ಕಾರದ ಡಿಬಿಟಿಯಿಂದ "ಸ್ಟಾರ್ ಕಾಲೇಜ್ ಸ್ಕೀಮ್" ಅಡಿಯಲ್ಲಿ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ESTD - 1964

ಊಟಿರಸ್ತೆ, ಮೈಸೂರು-೫೭೦ ೦೨೫

☎ 0821-2548236 & 2548380 Fax: 0821-2548238 E-mail: jssautonomous@gmail.com

# <u>ಪ್ರಕಟಣೆಯ ಕೃಪೆಗಾಗಿ</u>

**ದಿನಾಂಕ : 19-03-2015**

## ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಹಾಗೂ 'ಪ್ರತಿಭಾ' ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭ

ಮೈಸೂರು, ಮಾರ್ಚ್ 19 – 'ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಈ ಮಧುರ ಕ್ಷಣಗಳನ್ನು, ಸಂತೋಷದ ದಿನಗಳನ್ನು ಕಳೆದುಕೊಳ್ಳದೆ, ಸದುಪಯೋಗಪಡಿಸಿಕೊಂಡು, ಒಳ್ಳೆಯ ನಡೆನುಡಿ ಕಲಿತು ಕ್ರೀಯಾಶೀಲರಾಗಬೇಕು. ಸಮಾಜದ ವ್ಯವಸ್ಥೆ ನಿಮ್ಮ ಖುಷಿ, ಅವಕಾಶ ಕಸಿದುಕೊಳ್ಳಬಹುದು, ಇದಕ್ಕೆ ದಾರಿ ಕೊಡದೆ, ನಿಮ್ಮತನವನ್ನು ಉಳಿಸಿಕೊಂಡು, ಒಳ್ಳೆಯ ನಡತೆಯಿಂದ, ಸಮಾಜ ನೀಡಿರುವ ಸೌಕರ್ಯ, ಸೌಲಭ್ಯಗಳನ್ನು ಉಪಯೋಗಿಸಿಕೊಂಡು, ನಿಮ್ಮ ಅಭಿರುಚಿ, ಆಸೆ, ಈಡೇರಿಸಿಕೊಂಡು, ಉನ್ನತ ಮಟ್ಟದಲ್ಲಿ ಮುಂದುವರೆಯಿರಿ' – ಎಂದು ಪದವಿ ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಕಾಲೇಜಿನ ಪ್ರತಿಭಾ ವಾರ್ಷಿಕ ಸಂಚಿಕೆಯನ್ನು ಬಿಡುಗಡೆ ಮಾಡಿ, ಮಾತನಾಡುತ್ತಾ,ಮೈಸೂರಿನ ಪ್ರಾದೇಶಿಕ ಆಯುಕ್ತರ ಕಛೇರಿಯ ಹೆಚ್ಚುವರಿ ಆಯುಕ್ತರಾದ ಡಾ. ಎಂ. ಆರ್. ರವಿ ಅವರು ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಶ್ರೀ ಶಿವರಾತೀಶ್ವರ ವಿದ್ಯಾಸಂಸ್ಥೆಗಳು ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿಯೂ ಸಹ ಉನ್ನತ ಮಟ್ಟದಲ್ಲಿ ಶಿಕ್ಷಣ ಸೌಲಭ್ಯಗಳನ್ನು ನೀಡುತ್ತಿದೆ, ಇಂತಹ ಶಿಕ್ಷಣೋದ್ಧಾರ ಕಾಯಕದಲ್ಲಿ ತೊಡಗಿರುವ ಪರಮಪೂಜ್ಯ ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಅವರನ್ನು ಶ್ಲಾಘಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಕೆಎಆರ್‌ಪಿ ಮೌಂಟೆಡ್ ಪೊಲೀಸ್ ಕಮಾಂಡೆಂಟ್ ಶ್ರೀ ಆರ್. ಜನಾರ್ಧನ್ ಮಾತನಾಡಿ, ಪ್ರತಿಷ್ಠಿತ ಈ ಸಂಸ್ಥೆಯಲ್ಲಿ ಓದಿದವರಲ್ಲಿ ನಾನು ಒಬ್ಬನಾಗಿದ್ದೇನೆ, ಹಾಗೆಯೇ ಅನೇಕರು ಓದಿ ದೇಶ ವಿದೇಶಗಳಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಜೆಎಸ್‌ಎಸ್ ಸಂಸ್ಥೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶ್ರಮಿಸುತ್ತಿದೆ. ವಿದ್ಯಾರ್ಥಿಗಳು ಎಲ್ಲಾ ವಿಭಾಗಗಳಲ್ಲೂ ಭಾಗವಹಿಸಿ ಜೊತೆಗೆ ಕಾನೂನು ಹಾಗೂ ಸಮಾಜವನ್ನು ಅರಿತು, ನಡೆಯಬೇಕೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ಆವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಅಭಿನಂದನೆ ಸಲ್ಲಿಸಿ ಇಂದಿನ ಅತಿಥಿಗಳು ನೀಡಿದ ಮಾರ್ಗದರ್ಶನದಂತೆ ಮುಂದುವರಿಯಿರಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ವಿ. ಮಲ್ಲಿಕಾರ್ಜುನ ಪಂಡಿತ್‌ರವರು ಕಾಲೇಜು ಹೊಂದಿದ ಪ್ರಗತಿಯ ಪ್ರಶಸ್ತಿಯ ಬಗ್ಗೆ ತಿಳಿಸಿ ಸಮಾರೋಪ ಸಮೂಹದ ಪ್ರಾಮುಖ್ಯತೆಯನ್ನು ತಿಳಿಸಿದರು. ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆ ಸ್ಪರ್ಧೆಗಳಲ್ಲಿ ವಿಜೇತರಾದ ಹಾಗು ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ವೇದಿಕೆಯಲ್ಲಿದ್ದ ಗಣ್ಯರು ಬಹುಮಾನಗಳನ್ನು ವಿತರಿಸಿದರು.

ಇದೇ ಸಂದರ್ಭದಲ್ಲಿ ಕಾಲೇಜಿನ 'ಪ್ರತಿಭಾ' ವಾರ್ಷಿಕ ಸಂಚಿಕೆಯ ಸಂಪಾದಕರಾದ ಡಾ. ಎಂ.ಸಿ. ಸರೋಜಮ್ಮಣ್ಣಿ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಪ್ರೊ. ಪಿ.ಎಂ. ಮಹದೇವಸ್ವಾಮಿ, ಕ್ರೀಡಾ ವೇದಿಕೆ ಸಂಚಾಲಕರಾದ ಪ್ರೊ. ವೆಂಕಟರಾವ್ ಉಪಸ್ಥಿತರಿದ್ದರು.

ತೃತೀಯ ಬಿಎ ವಿದ್ಯಾರ್ಥಿ ಕು. ಮಧು ಸಾಂಸ್ಕೃತಿಕ ಚಟುವಟಿಕೆಗಳ ವರದಿಯನ್ನು, ದ್ವಿತೀಯ ಬಿಎಸ್ಸಿ ವಿದ್ಯಾರ್ಥಿನಿ ಕು. ಐಶ್ವರ್ಯ.ಜಿ. ಕ್ರೀಡಾ ಚಟುವಟಿಕೆಗಳ ವರದಿಯನ್ನು ಓದಿದರು. ಬಹುಮಾನಗಳ ಪಟ್ಟಿಯನ್ನು ತೃತೀಯ ಬಿಟಿಎಂ ವಿದ್ಯಾರ್ಥಿ ಎನ್. ಮನೋಹರ್ ಮತ್ತು ತೃತೀಯ ಬಿಎ ವಿದ್ಯಾರ್ಥಿ ಕೆ. ಕೆ. ಅಭಿಜಿತ್ ಓದಿದರು.

ತೃತೀಯ ಬಿ.ಎಸ್ಸಿ. ವಿದ್ಯಾರ್ಥಿನಿಯರಾದ ಮಾನಸ ಬಿ ಮತ್ತು ಅನುಷಾ ಪ್ರಾರ್ಥಿಸಿದರು. ತೃತೀಯ ಬಿ.ಎಸ್ಸಿ. ವಿದ್ಯಾರ್ಥಿನಿ ರಶ್ಮಿ ಸ್ವಾಗತ ಕೋರಿದರು. ತೃತೀಯ ಬಿ.ಎಸಿ.ಎ. ವಿದ್ಯಾರ್ಥಿನಿ ಕು. ಕೆ.ಎನ್. ಭವ್ಯ ಕಾರ್ಯಕ್ರಮ ನಿರೂಪಿಸಿದರು. ತೃತೀಯ ಬಿ.ಎ. ವಿದ್ಯಾರ್ಥಿನಿ ಕು. ಬಿ. ರಜಿನಿ ವಂದಿಸಿದರು. ಸಮಾರಂಭದಲ್ಲಿ ಪದವಿ ಉಪನ್ಯಾಸಕ ವರ್ಗ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.


ಪ್ರೊ. ಎಂ. ಬಿ. ಮಲ್ಲಿಕಾರ್ಜುನ ಪಂಡಿತ್
ಪ್ರಾಂಶುಪಾಲರು
ಜೆ.ಎಸ್.ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು-570 025


ಗೆ

ಸಂಪಾದಕರು

__________

__________